**2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಡಾಧಿಕಾರಿಗಳ ನ್ಯಾಯಾಲಯ, ಹೆಚ್ ಡಿ ಕೋಟೆ**

**ಸಿ.ಸಿ ನಂ. 416/2015**

**ಸಿ.ಡಬ್ಲ್ಯೂ- 12 ಪಿ.ಡಬ್ಲ್ಯೂ- 7**

ಸಾಕ್ಷಿದಾರರ ಹೆಸರು : ಅಂಕಪ್ಪ

ತಂದೆಯ ಹೆಸರು : ಮರಂಕನಾಯಕ

ವಯಸ್ಸು : 47

ಉದ್ಯೋಗ : ಸಹಾಯಕರು

ವಾಸ ಸ್ಥಳ : ಹೆಚ್.ಡಿ. ಕೋಟೆ

**ದಿನಾಂಕ 20.09.2024 ರಂದು ಸಾಕ್ಷಿಗೆ ಪ್ರಮಾಣ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ:- ಸ.ಸ. ಅ ರವರಿಂದಃ**

ಸಾಕ್ಷಿ ಅಮಾನತ್ತು ಪಂಚನಾಮೆಯಲ್ಲಿರುವ ತನ್ನ ಸಹಿ ಯನ್ನು ನೋಡಿ ಗುರುತಿಸಿದ ಮೇರೆಗೆ ಅಮಾನತ್ತು ಪಂಚನಾಮೆಯನ್ನು ನಿಪಿ 8 ಮತ್ತು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 8 (ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು 2015 ರಲ್ಲಿ ಆದಿ ಚುಂಚನಗಿರಿ ಶಾಲೆಯಲ್ಲಿ ಮಾಡಿರುತ್ತೇನೆ. ನಿಪಿ 8 ರಲ್ಲಿ ಬರೆದಿರುವ ವಿಚಾರಗಳು ಗೊತ್ತಿರುವುದಿಲ್ಲ. ನನ್ನ ಸಮಕ್ಷಮ ಬೇರೆ ಯಾರು ಸಹಿ ಮಾಡಿರುವುದಿಲ್ಲ. ನನ್ನ ಸಮಕ್ಷಮ ಯಾವುದೇ ವಸ್ತುಗಳು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಈ ವಿಚಾರವಾಗಿ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುವುದಿಲ್ಲ. ಸಾಕ್ಷಿ ಅಲ್ಲಗಳೆದ ಹೇಳಿಕೆ ಭಾಗವನ್ನು ನಿಪಿ 9 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಮಾನ್ಯ ಅಭಿಯೋಜಕರು ಪಾಟೀ ಸವಾಲಿಗೆ ಅನುಮತಿ ಕೋರಿದ್ದು, ನೀಡಲಾಯಿತು.)**

**ಪಾಟೀ ಸವಾಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿನಾಂಕ 02.07.2014 ರಂದು ನನ್ನ ಮತ್ತು ಚಾಸಾ 11 ಮತ್ತು 13 ರ ಸಮಕ್ಷಮ ಸುಮಾರು 27 ವಿದ್ಯಾರ್ಥಿಗಳ ದಾಖಲಾತಿಗಳನ್ನು ಅಮಾನತ್ತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದರು ಕೊಟ್ಟಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ವಕೀಲರಿಂದ ಇಲ್ಲ.**

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾ. ದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಗಣಕೀಕರಣಗೊಳಿಸಲಾಯಿತು)

2 ನೇ ಹೆಚ್ಚುವರಿ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ. ದಂಡಾಧಿಕಾರಿಗಳು, ಹೆಚ್.ಡಿ. ಕೋಟೆ.